**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರು ನ್ಯಾಯಾಲಯ, ಯಳಂದೂರು.**

**CC 1106/2026**

ಫಿರ್ಯಾದಿ : ರಾಜ್ಯದ ಪರವಾಗಿ ಯಳಂದೂರು ಪೊಲೀಸ್ ಠಾಣೆ

ವಿರುದ್ಧ

ಆರೋಪಿ : ಶಿವಪ್ರಸಾದ್ ಬಿನ್ ದೊಡ್ಡರಾಜು, 27 ವರ್ಷ,
ವೈ.ಕೆ. ಮೋಳೆ ಗ್ರಾಮ, ಯಳಂದೂರು ತಾಲ್ಲೂಕು.

**:ಆಪಾದನಾ ನೀಡಿಕೆ:**

**ಶ್ರೀಮತಿ ಸುಜಾತ ಹೆಚ್ ಎಲ್,ಎಲ್,ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಯಳಂದೂರು ಆದ ನಾನು ನಿಮ್ಮನ್ನು ಈ ಕೆಳಕಂಡ ಆರೋಪಗಳಿಗೆ ಗುರಿಪಡಿಸುತ್ತೇನೆ.**

ಮೊದಲನೇಯದಾಗಿ, ದಿನಾಂಕಃ 14.07.2026 ರಂದು ಸಂಜೆಃ 6.55 ಗಂಟೆ ಸಮಯದಲ್ಲಿ ಯಳಂದೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಯಳಂದೂರ್ ಟೌನಿನ ಬಸ್ ನಿಲ್ದಾಣದ ಬಳಿ ಆರೋಪಿಯಾದ ನೀನು ನಿನ್ನ ಬಾಬ್ತು KA-10-X-7818 ನೋಂದಣಿ ಸಂಖ್ಯೆಯುಳ್ಳ ದ್ವಿಚಕ್ರ ವಾಹನವನ್ನು ಅನುಮತಿಸಲಾದ ಮಿತಿಯನ್ನು ಮೀರಿ ಮದ್ಯದ ಅಮಲಿನಲ್ಲಿ ಚಲಾಯಿಸಿರುವ ನಿನ್ನ ಈ ಕ್ರಮವು ಭಾರತೀಯ ಮೋಟಾರು ವಾಹನ ಕಾಯ್ದೆ ಯ ಕಲಂ 185 ರಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಎಸಗಿದರುತ್ತೀರಿ.

ಎರಡನೇಯದಾಗಿ ಅದೇ ದಿನ ಅದೇ ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀನು ವಾಹನ ಚಾಲನಾ ಪರವಾನಗಿ ಇಲ್ಲದೆ ಮೇಲೆ ತಿಳಿಸಿದ ವಾಹನವನ್ನು ಚಲಾಯಿಸಿದ್ದು, ನಿನ್ನ ಈ ಕ್ರಮವು ಮೋಟಾರು ವಾಹನ ಕಾಯ್ದೆಯ ಕಲಂ. 181 ರಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಎಸಗಿದರುತ್ತೀರಿ.

**ಪ್ರಶ್ನೆ ಸಂಖ್ಯೆಃ** 1. ಮೇಲೆ ಹೇಳಿದ ದೋಷಾರೋಪಣೆಯನ್ನು ತಿಳಿದುಕೊಂಡಿರುವಿರಾ?
ಉತ್ತರಃ

**ಪ್ರಶ್ನೆ ಸಂಖ್ಯೆಃ** 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರಃ

ಮೇಲೆ ಪಡೆದ ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನಗೆ ಸ್ವತಃ ಹೇಳುವ ಹಾಗೆ ಪಡೆಯಲಾಗಿದ್ದು ಆರೋಪಿ ನುಡಿದ ಪೂರ್ಣ ಹಾಗೂ ಸತ್ಯವಾದ ಹೇಳಿಕೆಯನ್ನು ಈ ಬರಹವು ಒಳಗೊಂಡಿದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ದಿನಾಂಕಃ 20.07.2026

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,,
ಯಳಂದೂರು.